

ಪತ್ನಿ ನಿರುಪಮಾ ಅವರೊಂದಿಗೆ ಎಚ್‌.ಎಸ್‌. ರಾಘವೇಂದ್ರ ರಾವ್

ವಿಮರ್ಶೆಯನ್ನೇನೂ ನಾವು ಬೆಂಬಲಿಸಲಿಲ್ಲ. ನವ್ಯ ತಿರಸ್ಕರಿಸಿದ ನವೋದಯದ ಲೇಖಕರನ್ನು ಮತ್ತೊಮ್ಮೆ ರೀವಿಸಿಟ್ ಮಾಡಬೇಕು ಅಂತಲೂ ನಮಗೆ ಅನ್ನಿಸಿತು. ಹೀಗೆ ಅನೇಕ ಅಂಶಗಳು ಸೇರಿ ನಾನು ಮೇಲಿನ ಆಲೋಚನೆಯನ್ನು ಮುಂದಿಟ್ಟಿರಬಹುದು ಅನ್ನಿಸುತ್ತದೆ.

◆ **ಕನ್ನಡ ವಿಮರ್ಶೆಯು ಯಾವಾಗ ಸಾರ್ವತ್ರಿಕತೆ ಮತ್ತು ಸಂಸ್ಕೃತಿ ನಿರ್ದಿಷ್ಟತೆಯ ಮಾತುಗಳನ್ನಾಡಿದೆಯೊ ಆಗ ಒಳ್ಳೆಯದಕ್ಕಿಂತ ದ್ವಂದ್ವ ಮತ್ತು ಬಿಕ್ಕಟ್ಟುಗಳೇ ಹೆಚ್ಚು ಸೃಷ್ಟಿಯಾಗಿವೆ ಅಂತ ನಿಮಗೆ ಯಾಕನ್ನಿಸಿತು? ಯಾಕೆಂದರೆ ಈ ಮಾತನ್ನು ನೀವು ಒಂದೆರಡು ಬಾರಿ ನಿಮ್ಮ ವಿಮರ್ಶಾ ಲೇಖನಗಳಲ್ಲಿ ಬಹಳ ಖಚಿತವಾಗಿ ಪ್ರಸ್ತಾಪಿಸಿದ್ದೀರಿ?**

ಕುವೆಂಪು ಅವರು 'ವೈಶ್ವಿಕ' ಮತ್ತು 'ಸ್ಥಳೀಯ' ಅನ್ನೋ ಎರಡು ಪದ ಬಳಸ್ತಾರೆ. ಕಾಸ್ಮಿಕ್ ಮತ್ತು ಲೋಕಲ್. ಇದನ್ನು ಕೇವಲ ಭೌಗೋಳಿಕ ನೆಲೆಯಲ್ಲಿ ನೋಡದೆ ಸಾಮಾಜಿಕವಾದ ಹಲವು ನೆಲೆಗಳಲ್ಲಿ ನೋಡಲು ಸಾಧ್ಯವೇ ಅನ್ನೋದನ್ನು ಅವರು ಯೋಚಿಸಿದರು. ವೈಶ್ವಿಕವನ್ನು ಬಿಟ್ಟು ಸ್ಥಳೀಯವಾದದ್ದನ್ನು ನೋಡಬೇಕು ಅಂತ ಅವರು ಹೇಳಲಿಲ್ಲ. ಹಾಗೆಯೇ ಸ್ಥಳೀಯವಾದದ್ದನ್ನು ಬಿಟ್ಟು ವೈಶ್ವಿಕವಾದದ್ದನ್ನು ನೋಡಬೇಕು ಅಂತ ಕೂಡ ಅವರು ಹೇಳಲಿಲ್ಲ. ಸಂಸ್ಕೃತಿನಿರ್ದಿಷ್ಟತೆ ಕೂಡ ಸೀಮಿತವಾದದ್ದಲ್ಲ. ಅದು ಸಾಮಾಜಿಕವಾದದ್ದೂ ಹೌದು. ಒಂದು ಸಮಾಜದ ರಚನೆಯಲ್ಲಿರುವ ಅನುಭವ, ಚರಿತ್ರೆ, ಚಹರೆ, ಕಲಾಸೃಷ್ಟಿ ಎಲ್ಲವನ್ನೂ ಒಟ್ಟಾಗಿ ನಾವು ನೋಡುತ್ತಿರುತ್ತೇವೆ. ವೈಶ್ವಿಕತೆಯು ಸಂಸ್ಕೃತಿ ನಿರ್ದಿಷ್ಟತೆಯ ಎಲ್ಲಾ ಗುಣಗಳನ್ನು ಒಳಗೊಂಡು ಕೂಡ ಕಲೆಯಾಗಿ ಎಲ್ಲರನ್ನೂ ತಲುಪುವ, ಒಳಗೊಳ್ಳುವ ಸಾಧ್ಯತೆಗಳ ಬಗ್ಗೆ ಯೋಚನೆ ಮಾಡ್ತಾ ಇರುತ್ತೆ. ಕುವೆಂಪು, ಬೇಂದ್ರೆ ಅವರ ಬರವಣಿಗೆ ಇದಕ್ಕೊಂದು ನಿದರ್ಶನ. ಸಂಸ್ಕೃತಿ ನಿರ್ದಿಷ್ಟತೆಯು ಏಕಕಾಲದಲ್ಲಿ, ಬಹುತ್ವವನ್ನು ಒಳಗೊಳ್ಳುವ, ಪ್ರೀತಿಸುವ, ವಿಮರ್ಶಿಸುವ ಶಕ್ತಿಯನ್ನೂ ಹೊಂದಿರುತ್ತದೆ. ಇದು ನಾನು ಕಾಣುವ, ಕಟ್ಟುವ ಕಲಾಕೃತಿಯಲ್ಲಿ ಇರಬೇಕು ಅನ್ನುವ ನಂಬಿಕೆ ಒಂದು ದೃಷ್ಟಿಕೋನವನ್ನು ರೂಪಿಸಿದರೆ, ಇದರ ಅವಶ್ಯಕತೆ ಇಲ್ಲವೆಂದು ಭಾವಿಸಿ ಪ್ರತಿಯೊಂದು ಸಂಸ್ಕೃತಿಯೂ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ತನ್ನ ವಕ್ತಾರನಾಗಿ, ತನ್ನ ಒಳಲೋಕದ ತಾಕಲಾಟಗಳನ್ನು ಹೇಳಿದರೆ ಸಾಕು, ಎನ್ನುವ ಇನ್ನೊಂದು ದೃಷ್ಟಿಕೋನ ಕೂಡ ಇದೆ. ಇವೆರಡೂ ವಿಭಿನ್ನವಾದ ತಿಳಿವಳಿಕೆಗಳು. ಇಲ್ಲಿ